<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	256
ಸದಸ್ಯರ ಹೆಸರು	:	ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ).
ಉತ್ತರಿಸುವ ದಿನಾಂಕ	:	16.07.2019.
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) 10 ಮಕ್ಕಳಿಗಿಂತ ಕಡಿಮೆ ದಾಖಲಾತಿ ಇರುವ ಶಾಲೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ದಾಖಲಾತಿ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಬೀದರ ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿವರ ಕೆಳಕಂಡಂತಿದೆ:-
<table>
<tr><th rowspan="2">ಕ್ರಸಂ</th><th rowspan="2">ತಾಲ್ಲೂಕು</th><th colspan="2">ಸರ್ಕಾರಿ</th><th colspan="2">ಅನುದಾನಿತ</th><th colspan="2">ಅನುದಾನ ರಹಿತ</th><th colspan="2">ಒಟ್ಟು</th><th colspan="2">10ಕ್ಕಿಂತ ಕಡಿಮೆ ಮಕ್ಕಳು ಇರುವ ಸರ್ಕಾರಿ ಶಾಲೆಗಳು</th></tr>
<tr><th>PS</th><th>HS</th><th>PS</th><th>HS</th><th>PS</th><th>HS</th><th>PS</th><th>HS</th><th>PS</th><th>HS</th></tr>
<tr><td>1</td><td>ಔರಾದ</td><td>294</td><td>30</td><td>23</td><td>20</td><td>61</td><td>16</td><td>378</td><td>66</td><td>8</td><td>0</td></tr>
<tr><td>2</td><td>ಬಸವಕಲ್ಯಾಣ</td><td>233</td><td>36</td><td>27</td><td>21</td><td>134</td><td>40</td><td>394</td><td>97</td><td>1</td><td>0</td></tr>
<tr><td>3</td><td>ಭಾಲ್ಕಿ</td><td>232</td><td>30</td><td>41</td><td>20</td><td>69</td><td>31</td><td>342</td><td>81</td><td>9</td><td>0</td></tr>
<tr><td>4</td><td>ಬೀದರ</td><td>282</td><td>32</td><td>82</td><td>52</td><td>233</td><td>80</td><td>597</td><td>164</td><td>6</td><td>0</td></tr>
<tr><td>5</td><td>ಹುಮನಾಬಾದ</td><td>207</td><td>37</td><td>36</td><td>27</td><td>146</td><td>66</td><td>389</td><td>130</td><td>2</td><td>0</td></tr>
<tr><td></td><td>ಒಟ್ಟು</td><td>1248</td><td>165</td><td>209</td><td>140</td><td>643</td><td>233</td><td>2100</td><td>538</td><td>26</td><td>0</td></tr>
</table>
ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮುಖ್ಯವಾಹಿನಿಗೆ ಕರೆತರುವ ಕಾರ್ಯಕ್ರಮ, ಉಚಿತ ಪಠ್ಯಪುಸ್ತಕ, ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಶೂ & ಸಾಕ್ಸ್ ವಿತರಣೆಯಿಂದ ಹಾಗೂ ಒಂದೇ ಸೂರಿನಡಿ ವಿದ್ಯಾಭ್ಯಾಸ ಕಲ್ಪಿಸಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು 2019-20ನೇ ಸಾಲಿನಿಂದ "ಕರ್ನಾಟಕ ಪಬ್ಲಿಕ್ ಶಾಲೆಗಳನ್ನು" ಪ್ರಾರಂಭಿಸುವ ಮೂಲಕ ದಾಖಲಾತಿ ಹೆಚ್ಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.</td></tr>
<tr><td>ಆ)</td><td>ಬೀದರ ಜಿಲ್ಲೆಯ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;</td><td>ಬಂದಿದೆ.
ಸದರಿ ವಸತಿ ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಮಕ್ಕಳ ಸಂಖ್ಯೆಗನುಗುಣವಾಗಿ ಶೌಚಾಲಯದ ಕೊರತೆ ಇರುತ್ತದೆ. ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಮೂಲಕ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.</td></tr>
<tr><td>ಇ)</td><td>ಶಿಕ್ಷಕರ ಕೊರತೆಯಿಂದಾಗಿ ಎಸ್.ಎಸ್.ಎಲ್.ಸಿ ಫಲಿತಾಂಶವು ಕಡಿಮೆ ಪ್ರಮಾಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಶೈಕ್ಷಣಿಕ ವರ್ಷ ಆರಂಭವಾಗಿ 2 ತಿಂಗಳು ಮುಗಿಯುತ್ತಿದ್ದರೂ</td><td>ಏಪ್ರಿಲ್-2019ನೇ ಸಾಲಿನಲ್ಲಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಕಳೆದ ಸಾಲಿನ ಫಲಿತಾಂಶಕ್ಕಿಂತ ಏಳು ಸ್ಥಾನಗಳು ಮೇಲ್ಪಟ್ಟು ಸಾಧನೆ ಹೊಂದುವ ಮೂಲಕ ಫಲಿತಾಂಶದಲ್ಲಿ ಸುಧಾರಣೆ ಕಂಡುಬಂದಿರುತ್ತದೆ.
ಪ್ರಸ್ತುತ ಜಿಲ್ಲೆಯಲ್ಲಿ 134 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಸದರಿ ಖಾಲಿ ಹುದ್ದೆಗಳನ್ನು ಅತಿಥಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಹಾಗೂ ವರ್ಗಾವಣೆ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
</table>

ಇನ್ನೂ ಶಿಕ್ಷಕರ ನೇಮಕವಾಗದಿರಲು ಕಾರಣವೇನು; ಯಾವ ಕಾಲಮಿತಿಯೊಳಗೆ ಶಿಕ್ಷಕರು/ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗುವುದು;

ಈ) ಜಿಲ್ಲೆಯಲ್ಲಿ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಎಷ್ಟು; (ಮಕ್ಕಳ ಸಂಖ್ಯೆಯೊಂದಿಗೆ ತಾಲ್ಲೂಕುವಾರು ಮಾಹಿತಿ ನೀಡುವುದು)

ಬೀದರ ಜಿಲ್ಲೆಯ ಖಾಸಗಿ ಶಾಲೆಗಳ ಮತ್ತು ಮಕ್ಕಳ ವಿವರ ಕೆಳಕಂಡಂತಿದೆ:-

ಕ್ರಸಂ	ತಾಲ್ಲೂಕು	ಅನುದಾನಿತ		ಅನುದಾನ ರಹಿತ		ಒಟ್ಟು		ಅನುದಾನಿತ ಒಟ್ಟು ಮಕ್ಕಳ ಸಂಖ್ಯೆ		ಅನುದಾನ ರಹಿತ ಒಟ್ಟು ಮಕ್ಕಳ ಸಂಖ್ಯೆ	
		PS	HS	PS	HS	PS	HS	PS	HS	PS	HS
1	ಔರಾದ	23	20	61	16	84	36	4554	2166	13934	1108
2	ಬಸವಕಲ್ಯಾಣ	27	21	134	40	161	61	6633	2733	24477	3277
3	ಭಾಲ್ಕಿ	41	20	69	31	110	51	7348	2660	15216	2896
4	ಬೀದರ	82	52	233	80	315	132	17157	5188	43716	7312
5	ಹುಮನಾಬಾದ	36	27	146	66	182	93	10018	3364	26474	4514
	ಒಟ್ಟು	209	140	643	233	852	373	45710	16111	123817	19107

ಉ) ಸರ್ಕಾರದಿಂದ ನುರಿತ ಶಿಕ್ಷಕರೊಂದಿಗೆ ಎಲ್ಲ ರೀತಿಯ ಯೋಜನೆಗಳನ್ನು ಸರ್ಕಾರಿ ಶಾಲೆಗಳಿಗೆ ನೀಡಿದರೂ ಸಹ ದಾಖಲಾತಿ ಕಡಿಮೆಯಾಗಲು ಕಾರಣವೇನು; ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ವಿದ್ಯಾರ್ಥಿಗಳ ಪಾಲಕ, ಪೋಷಕರು ಅವರ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ದಾಖಲಿಸುತ್ತಿರುವುದರಿಂದ, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗಲು ಕಾರಣವಾಗಿರುತ್ತದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವ ಕಾರ್ಯಕ್ರಮ, ಉಚಿತ ಪಠ್ಯಪುಸ್ತಕ, ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಶೂ & ಸಾಕ್ಸ್ ವಿತರಣೆ ಹಾಗೂ ಒಂದೇ ಸೂರಿನಡಿ ವಿದ್ಯಾಭ್ಯಾಸ ಕಲ್ಪಿಸಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು 2019-20ನೇ ಸಾಲಿನಿಂದ "ಕರ್ನಾಟಕ ಪಬ್ಲಿಕ್ ಶಾಲೆಗಳನ್ನು" ಪ್ರಾರಂಭಿಸುವ ಮೂಲಕ ದಾಖಲಾತಿ ಹೆಚ್ಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಇಪಿ 67 ಎಸ್‌ಇಎಸ್ 2019)

(ಎಸ್.ಆರ್. ಶ್ರೀನಿವಾಸ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ,